# ಮೂಲಭೂತ ಹಕ್ಕುಗಳು

ವ್ಯಕ್ತಿಯ ವ್ಯಕ್ತಿತ್ವದ ವಿಕಸನಕ್ಕೆ ಅಗತ್ಯವಾದ ಸಾಮಾಜಿಕ ಮತ್ತು ರಾಜಕೀಯ ವಾತಾವರಣವನ್ನೇ ಮೂಲಭೂತ ಹಕ್ಕುಗಳು ಎಂದು ಕರೆಯುತ್ತಾರೆ. ಸಮಾಜದಲ್ಲಿ ಮನುಷ್ಯನು ನಾಗರೀಕ ಜೀವನ ನಡೆಸಲು ಮೂಲಭೂತ ಹಕ್ಕುಗಳು ಅತ್ಯವಶ್ಯಕ. ಈ ಹಕ್ಕುಗಳು ಪ್ರಜಾಪ್ರಭುತ್ವದ ಯಶಸ್ಸಿಗೆ ಅಗತ್ಯವಾದವುಗಳು. ನಮ್ಮ ಸಂವಿಧಾನದ 3ನೇ ಭಾಗದಲ್ಲಿ 7 ಮೂಲಭೂತ ಹಕ್ಕುಗಳನ್ನು ಅಳವಡಿಸಲಾಗಿತ್ತು. ಆದರೆ ಸಂವಿಧಾನದ 44ನೇ ತಿದ್ದುಪಡಿಯಿಂದಾಗಿ ಆಸ್ತಿ ಹಕ್ಕನ್ನು ರದ್ದು ಪಡಿಸಲಾಗಿದೆ. ಪ್ರಸ್ತುತ 06 ಮೂಲಭೂತ ಹಕ್ಕುಗಳಿವೆ.

ಸಮಾನತೆಯ ಹಕ್ಕು: ಪ್ರಜಾಪ್ರಭುತ್ವದ ಯಶಸ್ಸಿಗೆ ಈ ಹಕ್ಕು ಅಗತ್ಯವಾಗಿದ್ದು, ಶಾಸನಾತ್ಮಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಸಮಾನತೆ ಕಲ್ಪಿಸಿದ್ದಾರೆ. ಕಾನೂನಿನ ಮುಂದೆ ಎಲ್ಲರೂ ಸಮಾನರು, ಕಾನೂನಿಗಿಂತ ಯಾರೂ ಶ್ರೇಷ್ಠರಲ್ಲ. ಪ್ರತಿಯೊಬ್ಬರೂ ರಾಜ್ಯದ ಕಾನೂನಿಗೆ ಬದ್ಧರಾಗಿರಬೇಕು. ಜಾತಿ, ಧರ್ಮ, ಲಿಂಗ, ಜನ್ಮಸ್ಥಳಗಳ ಆಧಾರದ ಮೇಲೆ ಭೇದಭಾವ ಮಾಡಬಾರದು. ಸಾರ್ವಜನಿಕ ಸ್ಥಳಗಳು, ಹೋಟೆಲ್‌ಗಳು, ಅಂಗಡಿಗಳು, ಮನರಂಜನಾ ಸ್ಥಳಗಳು, ದೇವಾಲಯಗಳು ಮುಂತಾದ ಸ್ಥಳಗಳಲ್ಲಿ ಯಾರೊಬ್ಬರಿಗೂ ಪ್ರವೇಶ ನಿರಾಕರಿಸಬಾರದು. ಸರ್ಕಾರಿ ಉದ್ಯೋಗ ಸೇರಲು ಪ್ರತಿಯೊಬ್ಬರಿಗೂ ಸಮಾನ ಅವಕಾಶ ದೊರಕಿಸಿದೆ ಅಸ್ಪೃಶ್ಯತೆಯನ್ನು ಆಚರಿಸಬಾರದು.

**ಸ್ವಾತಂತ್ರ್ಯದ ಹಕ್ಕು:** ಮೂಲಭೂತ ಹಕ್ಕುಗಳಲ್ಲಿ ಸ್ವಾತಂತ್ರ್ಯದ ಹಕ್ಕು ಮಹತ್ವದ ಸ್ಥಾನ ಪಡೆದಿದೆ. ಈ ಹಕ್ಕಿನಡಿಯಲ್ಲಿ ವಾಕ್ ಮತ್ತು ಅಭಿಪ್ರಾಯ ವ್ಯಕ್ತಪಡಿಸುವ, ಶಸ್ತ್ರರಹಿತ ಶಾಂತಿಯುತವಾಗಿ ಸಭೆ ಸೇರುವ, ಸಂಘ ಸಂಸ್ಥೆಗಳನ್ನು ಸ್ಥಾಪಿಸುವ, ಭಾರತದಲ್ಲಿ ಸಂಚರಿಸುವ, ವಾಸಿಸುವ, ಯಾವುದೇ ವೃತ್ತಿ ಹೊಂದುವ ಸ್ವಾತಂತ್ರ್ಯ ನೀಡಲಾಗಿದೆ. ಪೌರರಿಗೆ ಇದು ರಕ್ಷಣಾತ್ಮಕ ಹಕ್ಕಾಗಿದ್ದು, ಸಕಾರಣವಿಲ್ಲದೆ ವ್ಯಕ್ತಿಯನ್ನು ಬಂಧಿಸುವಂತಿಲ್ಲ ಮತ್ತು ರಾಜ್ಯ ಕಾನೂನನ್ನು ಮಾಡುವುದರ ಮೂಲಕ ವ್ಯಕ್ತಿಯ ಜೀವ ತೆಗೆಯುವ ಅಥವಾ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವಂತಿಲ್ಲ.

**ಶೋಷಣೆಯ ವಿರುದ್ಧದ ಹಕ್ಕು** : ಶೋಷಣೆ ಒಂದು ಸಾಮಾಜಿಕ ಪಿಡುಗಾಗಿದೆ. ಈ ಪಿಡುಗನ್ನು ನಿರ್ಮೂಲನ ಮಾಡಲು ಶೋಷಣೆಯ ವಿರುದ್ಧದ ಹಕ್ಕನ್ನು ಸಂವಿಧಾನದಲ್ಲಿ ಅಳವಡಿಸಲಾಗಿದೆ. ರಾಜ್ಯವಾಗಲೀ, ಯಾವುದೇ ವ್ಯಕ್ತಿಯಾಗಲೀ, ದುರ್ಬಲರನ್ನು, ಬಡವರನ್ನು, ಮಹಿಳೆಯರನ್ನು, ಮಕ್ಕಳನ್ನು ಶೋಷಣೆ ಮಾಡುವಂತಿಲ್ಲ. ಭಿಕ್ಷಾಟನೆ, ದೇವದಾಸಿ ಪದ್ಧತಿ, ಸತಿ ಆಚರಣೆ, ಅನೈತಿಕ ಚಟುವಟಿಕೆ ಮತ್ತು ಬಲವಂತ ದುಡಿಮೆಯನ್ನು ನಿಷೇಧಿಸಲಾಗಿದೆ. 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕಾರ್ಖಾನೆ, ಗಣಿ ಅಥವಾ ಅಪಾಯಕಾರಿ ಕೆಲಸಗಳಿಗೆ ನೇಮಿಸಿಕೊಳ್ಳುವಂತಿಲ್ಲ.

**ಧಾರ್ಮಿಕ ಸ್ವಾತಂತ್ರ್ಯದ ಹಕ್ಕು:** ಭಾರತ ಜಾತ್ಯತೀತ (ಧರ್ಮನಿರಪೇಕ್ಷ) ರಾಷ್ಟ್ರ. ಯಾವುದೇ ಧರ್ಮವನ್ನು ರಾಷ್ಟ್ರೀಯ ಧರ್ಮವನ್ನಾಗಿ ಅಂಗೀಕರಿಸಿಲ್ಲ. ಪೌರರು ತಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ಯಾವುದೇ ಧರ್ಮವನ್ನು ಸ್ವೀಕರಿಸುವ, ಪಾಲಿಸುವ, ಪ್ರಚಾರ ಮಾಡುವ ಸ್ವಾತಂತ್ರ್ಯ ಪಡೆದಿದ್ದಾರೆ. ಧಾರ್ಮಿಕ ಸಂಸ್ಥೆಗಳ ನಿರ್ವಹಣೆಗಾಗಿ ತೆರಿಗೆ ಕೊಡಬೇಕೆಂದು ಒತ್ತಾಯಿಸುವಂತಿಲ್ಲ. ಧಾರ್ಮಿಕ ಸಂಸ್ಥೆಗಳನ್ನು ರಾಜಕೀಯ ಉದ್ದೇಶಗಳಿಗೆ ಬಳಸುವಂತಿಲ್ಲ.

**ಸಾಂಸ್ಕೃತಿಕ ಮತ್ತು ವಿದ್ಯಾಭ್ಯಾಸದ ಹಕ್ಕು:** ದೇಶದಲ್ಲಿ ವಾಸಿಸುವ ಪೌರರು ತಮ್ಮದೇ ಆದ ಭಾಷೆ, ಲಿಪಿ, ಸಂಸ್ಕೃತಿಯನ್ನು ಹೊಂದಿದ್ದಾರೆ. ಇವುಗಳ ರಕ್ಷಣೆ ರಾಜ್ಯದ್ದಾಗಿರುತ್ತದೆ. ಧಾರ್ಮಿಕ-ಭಾಷಾ ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ರಕ್ಷಿಸುವ ಉದ್ದೇಶದಿಂದ ಈ ಹಕ್ಕನ್ನು ಸಂವಿಧಾನದಲ್ಲಿ ಅಳವಡಿಸಲಾಗಿದೆ. ಅಲ್ಪಸಂಖ್ಯಾತರ ಸಂಸ್ಥೆಗಳು ಮತ್ತು ರಾಜ್ಯದ ಧನಸಹಾಯ ಪಡೆದು ನಡೆಸುವ ವಿದ್ಯಾ ಸಂಸ್ಥೆಗಳಲ್ಲಿ ಯಾರಿಗೇ ಆಗಲಿ ಪ್ರವೇಶ ನಿರಾಕರಿಸುವಂತಿಲ್ಲ.

**ಸಂವಿಧಾನದ ಪರಿಹಾರದ ಹಕ್ಕು:** ಮೂಲಭೂತ ಹಕ್ಕುಗಳ ರಕ್ಷಣೆಗಾಗಿ ಸಂವಿಧಾನದ 32ನೇ ವಿಧಿಯಲ್ಲಿ ಅವಕಾಶ ಮಾಡಿಕೊಡಲಾಗಿದೆ. ಸಂವಿಧಾನದಲ್ಲಿ ಇದೊಂದು ವಿಶೇಷ ಲಕ್ಷಣವಾಗಿದೆ. ಆದುದರಿಂದ ಬಿ.ಆರ್. ಅಂಬೇಡ್ಕರ್ ಈ ಹಕ್ಕನ್ನು 'ಸಂವಿಧಾನದ ಆತ್ಮ ಮತ್ತು ಹೃದಯ'ವಿದ್ದಂತೆ ಎಂದಿದ್ದಾರೆ.

ಮೂಲಭೂತ ಹಕ್ಕುಗಳಿಗೆ ಯಾವುದೇ ವ್ಯಕ್ತಿಯಿಂದಾಗಲೀ, ರಾಜ್ಯ ಅಥವಾ ಕೇಂದ್ರ ಸರ್ಕಾರದಿಂದಾಗಲೀ ಧಕ್ಕೆ ಉಂಟಾದರೆ ರಕ್ಷಣೆಗಾಗಿ ನೇರವಾಗಿ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಬಹುದು. ಆದುದರಿಂದ ಸರ್ವೋಚ್ಚ ನ್ಯಾಯಾಲಯವನ್ನು 'ಮೂಲಭೂತ ಹಕ್ಕುಗಳ ರಕ್ಷಕ' ಎಂದು ಕರೆಯಲಾಗಿದೆ. ವಿಧಿ 226ರನ್ವಯ ಉಚ್ಚ ನ್ಯಾಯಾಲಯಗಳು ಕೂಡಾ ಹಕ್ಕುಗಳ ರಕ್ಷಣೆಗಾಗಿ ಈ ಕೆಳಕಂಡ ರಿಟ್‌ಗಳನ್ನು ಹೊರಡಿಸುವ ಅಧಿಕಾರ ಹೊಂದಿರುತ್ತವೆ.

ಎ) ಬಂಧೀ ಪ್ರತ್ಯಕ್ಷೀಕರಣ: ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳು ಅಕ್ರಮವಾಗಿ ಬಂಧಿತವಾದ ವ್ಯಕ್ತಿಯನ್ನು ತನ್ನ ಮುಂದೆ ನಿಗದಿತ ಅವಧಿಯೊಳಗೆ ಹಾಜರುಪಡಿಸುವಂತೆ ನೀಡುವ ಆಜ್ಞೆಯೇ ಬಂಧಿ ಪ್ರತ್ಯಕ್ಷೀಕರಣವಾಗಿರುತ್ತದೆ. ಇದು ವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸುತ್ತದೆ.

ಬಿ) ಪರಮಾದೇಶ : ಶಾಸಕಾಂಗ, ಕಾರ್ಯಾಂಗ ಅಥವಾ ಅವುಗಳ ಅಧೀನ ಸಂಸ್ಥೆಗಳು ನಿರ್ವಹಿಸಬೇಕಾದ ಕಾರ್ಯಗಳನ್ನು, ನಿರ್ವಹಿಸದೇ ಇದ್ದಾಗ, ಸಂಬಂಧಪಟ್ಟ ಕಾರ್ಯಗಳನ್ನು ನಿಗದಿತ ಅವಧಿಯೊಳಗೆ ನಿರ್ವಹಿಸುವಂತೆ ಸರ್ವೋಚ್ಚ ನ್ಯಾಯಾಲಯ ಅಥವಾ ಉಚ್ಚ ನ್ಯಾಯಾಲಯ ನೀಡುವ ಆಜ್ಞೆಯೇ ಪರಮಾದೇಶವಾಗಿರುತ್ತದೆ. ಈ ಆಜ್ಞೆಯನ್ನು ಖಾಸಗಿ ವ್ಯಕ್ತಿಗಳು, ರಾಜ್ಯಪಾಲರು ಮತ್ತು ರಾಷ್ಟ್ರಾಧ್ಯಕ್ಷರ ವಿರುದ್ಧ ಹೊರಡಿಸಲು ಬರುವುದಿಲ್ಲ.

ಸಿ) ಪ್ರತಿಬಂಧಕಾಜ್ಞೆ : ಅಧೀನ ನ್ಯಾಯಾಲಯಗಳು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ಅಥವಾ ನೈಸರ್ಗಿಕ ನಿಯಮಗಳಿಗೆ ವಿರುದ್ಧವಾಗಿ ತೀರ್ಪು ನೀಡಿದಾಗ, ಉನ್ನತ ನ್ಯಾಯಾಲಯ ಅಂತಹ ತೀರ್ಪನ್ನು ತಕ್ಷಣ ಸ್ಥಗಿತಗೊಳಿಸುವಂತೆ ನೀಡುವ ಆಜ್ಞೆಯೇ ಪ್ರತಿಬಂಧಕಾಜ್ಞೆಯಾಗಿರುತ್ತದೆ. ಈ ಆಜ್ಞೆಯನ್ನು ಉನ್ನತ ನ್ಯಾಯಾಲಯ ಅಧೀನ ನ್ಯಾಯಾಲಯಗಳ ವಿರುದ್ಧ ಮಾತ್ರ ಹೊರಡಿಸಬಹುದಾಗಿದೆ.

ಡಿ) ಉತ್ಪ್ರೇಕ್ಷಣಾ ಲೇಖ (ಸರ್ಷಿಯೋರರಿ) : ಅಧೀನ ನ್ಯಾಯಾಲಯಗಳು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ಅಥವಾ ನೈಸರ್ಗಿಕ ನಿಯಮಗಳಿಗೆ ವಿರುದ್ಧವಾಗಿ ತೀರ್ಪು ನೀಡಿದಾಗ, ಉನ್ನತ ನ್ಯಾಯಾಲಯ ತೀರ್ಪಿಗೆ ಸಂಬಂಧಪಟ್ಟ ದಾಖಲೆಗಳನ್ನು ತನಗೆ ನೀಡುವಂತೆ ಆಜ್ಞೆ ಮಾಡುವದೇ ಉತ್ಪ್ರೇಕ್ಷಣಾ ಲೇಖವಾಗಿರುತ್ತದೆ.

ಇ) ಅಧಿಕಾರ ಲೇಖ(ಕೋ-ವಾರಂಟ್) : ಸರಿಯಾದ ವ್ಯಕ್ತಿ ಸರಿಯಾದ ಸಾರ್ವಜನಿಕ ಸ್ಥಾನವನ್ನು ಹೊಂದುವಂತೆ ಉನ್ನತ ನ್ಯಾಯಾಲಯ ನೀಡುವ ಆಜ್ಞೆಯೇ ಅಧಿಕಾರ ಲೇಖವಾಗಿರುತ್ತದೆ. ಅಕ್ರಮವಾಗಿ ಸಾರ್ವಜನಿಕ ಸ್ಥಾನಗಳನ್ನು ಹೊಂದುವರ ವಿರುದ್ಧ ಉನ್ನತ ನ್ಯಾಯಾಲಯ ಈ ಆಜ್ಞೆಯನ್ನು ಹೊರಡಿಸುತ್ತದೆ. ಸಾಮಾಜಿಕವಾಗಿ

ನಷ್ಟವಾಗಿರುವ ಹಕ್ಕುಗಳ ರಕ್ಷಣೆಗಾಗಿ ಅಥವಾ ಸಾರ್ವಜನಿಕ ಹಿತಾಸಕ್ತಿ ರಕ್ಷಿಸುವುದಕ್ಕಾಗಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳನ್ನು (Public interest litigation) ಹೂಡಲಾಗುತ್ತದೆ.

---

## ಇತಿಹಾಸ ಪಾಠ ಯೋಜನೆಯ ಮಾದರಿ

**ಅಧ್ಯಾಪಕರ ಹೆಸರು: xxxxxx** **ದಿನಾಂಕ: xxx** **ವಿಷಯ: ಭಾರತದ ಸಂವಿಧಾನ** **ಉಪ ವಿಷಯ: ಮೂಲಭೂತ ಹಕ್ಕುಗಳು**

**ತರಗತಿ: xxx** **ವಿಭಾಗ: xxx** **ಅವಧಿ: xxx** **ಮಾಧ್ಯಮ: xxx**

---

---

- ಪರಿಕಲ್ಪನೆಗಳು ಮತ್ತು ಇತರ ವಿಷಯಗಳು: ಮೂಲಭೂತ ಹಕ್ಕುಗಳು, ಸಮಾನತೆಯ ಹಕ್ಕು ಸ್ವಾತಂತ್ರ್ಯದ ಹಕ್ಕು, ಶೋಷಣೆಯ ವಿರುದ್ಧದ ಹಕ್ಕು, ಧಾರ್ಮಿಕ ಸ್ವಾತಂತ್ರ್ಯದ ಹಕ್ಕು, ಮತ್ತು ಸಾಂಸ್ಕೃತಿಕ ಮತ್ತು ವಿದ್ಯಾಭ್ಯಾಸದ ಹಕ್ಕು: ಇವುಗಳ ಅರ್ಥವನ್ನು ತಿಳಿದು ಅವುಗಳನ್ನು ಅವರ ಬದುಕಿನಲ್ಲ ಅನ್ವಯಿಸುವ ಮಾರ್ಗಗಳನ್ನೂ ಆ ಕುರಿತ ಜವಾಬ್ದಾರಿಗಳನ್ನೂ ವಿವರಿಸುವರು.
- ಕೌಶಲಗಳು: ಅಭಿಪ್ರಾಯಗಳನ್ನು ವ್ಯಕ್ತಪಡಿಸುವ, ಚರ್ಚೆಯಲ್ಲಿ ಭಾಗವಹಿಸುವ ಕೌಶಲಗಳನ್ನು ಉತ್ತಮಪಡಿಸಿಕೊಳ್ಳುವರು.
- ಮನೋಭಾವ: ರಾಷ್ಟ್ರ ನಿಷ್ಠೆ, ಸಹಕಾರ, ಕರ್ತವ್ಯ ಪ್ರಜ್ಞೆ ಮತ್ತು ಸಂವಿಧಾನವನ್ನು ಕುರಿತ

**ಬೋಧನಾ ಕಲಿಕಾ ಸಂಪನ್ಮೂಲಗಳು:**

- ಸಂವಿಧಾನದ ಪ್ರಸ್ತಾವನೆಯ ವಿಷಯವನ್ನು ಒಳಗೊಂಡ ಫಲಕ
- ಮೂಲಭೂತ ಹಕ್ಕುಗಳನ್ನು ವಿವರಿಸುವ ನಕ್ಷೆ
- ಸಂವಿಧಾನದಲ್ಲಿ ನಮೂದಾಗಿರುವ ಮೂಲಭೂತ ಹಕ್ಕುಗಳನ್ನು ಕುರಿತ ವೀಡಿಯೋ

**ವಿಧಾನ ಮತ್ತು ಉಪಕ್ರಮಗಳು:** ಉಪನ್ಯಾಸ ಚರ್ಚಾ ವಿಧಾನ, ವಿವರಣೆ, ಪ್ರಶ್ನೆ, ರಸಪ್ರಶ್ನೆ, ದೃಷ್ಟಾಂತ, ಸ್ವಾನುಭವಗಳ ವಿವರಣೆ, ಗುಂಪು ಚರ್ಚೆ, ಗುಂಪು ಪ್ರಾಜೆಕ್ಟ್ ಕೆಲಸ.

| **ಬೋಧನಾ ಹಂತಗಳು** | **ಬೋಧನಾ ಹಂತಗಳ ವಿವರ** | **ಬೋಧನಾ ಕಲಿಕಾ ಚಟುವಟಿಕೆಗಳು** | **ಕಲಿಕಾ ಪ್ರಕ್ರಿಯೆಯ ನಿರ್ದಿಷ್ಟಗಳು** |
|---|---|---|---|
| ಹಂತ 1 | **ಪೂರಕ ವಾತಾವರಣ ಸೃಷ್ಟಿ/ ಪೂರ್ವಜ್ಞಾನದ ಪ್ರಚೋದನೆ.** | ಸಂವಿಧಾನದ ಪ್ರಸ್ತಾವನೆಯನ್ನು ಮುದ್ರಿಸಿದ ಪಟವನ್ನು ತೂಗುಹಾಕಿ ಪ್ರಶ್ನೆಗಳನ್ನು ಕೇಳಿ ಮೂಲಭೂತ ಹಕ್ಕುಗಳು ಸಂವಿಧಾನದಿಂದ ಎಲ್ಲ ಪೌರರಿಗೆ ಕೊಡಮಾಡಿರುವ ವಿಶೇಷ ಅವಕಾಶಗಳು ಎಂಬುದನ್ನು ವಿದ್ಯಾರ್ಥಿಗಳು ಗುರುತಿಸುವಂತೆ ಪೂರಕ ಸನ್ನಿವೇಶಗಳನ್ನು ಒದಗಿಸುವರು. | ಸಂವಿಧಾನದ ಪ್ರಸ್ತಾವನೆಯ ಚಿತ್ರವನ್ನು ಗಮನಿಸಿ ತಮಗೆ ತಿಳಿದಿರುವ ಅಂಶಗಳನ್ನು ಹಂಚಿಕೊಳ್ಳುವರು, ಅಧ್ಯಾಪಕರ ಪ್ರಶ್ನೆಗಳಿಗೆ ಉತ್ತರಿಸುವರು. |
| ಹಂತ 2 | **ಕಲಿಕಾ ವಿಷಯವನ್ನು ಪ್ರಸ್ತುತಪಡಿಸುವುದು ಮತ್ತು ಪರಿಚಯಿಸುವುದು.** | ಕಲಿಕಾ ಅಂಶಗಳನ್ನು ಕೆಳಕಂಡಂತೆ ಪ್ರಸ್ತುತ ಪಡಿಸಿ ಪರಿಚಯಿಸುವರು<br>ಉದ್ದೇಶ ನಿರೂಪಣೆ; ಇಂದು ನಾವು ಅತ್ಯಂತ ಪ್ರಮುಖವಾದ ಮತ್ತು ನಮ್ಮೆಲ್ಲರ ಬದುಕಿಗೆ ಅನ್ವಯಿಸುವ ಒಂದು ವಿಷಯವನ್ನು ಕುರಿತು ಆಲೋಚಿಸಲಿದ್ದೇವೆ. ಅದೇಂದರೆ 'ಮೂಲಭೂತ ಹಕ್ಕುಗಳು'.<br>ಭಾರತ ಸಂವಿಧಾನವು ಪ್ರಜೆಗಳಿಗೆ ನೀಡಿರುವ ಮೂಲಭೂತ ಹಕ್ಕುಗಳ ಕುರಿತು ಈಗ ಚರ್ಚಿಸೋಣ.<br>ಇಂದು ನಾವು ಕಲಿಯಲಿರುವ ಅಂಶಗಳು:<br>ಭಾರತ ಸಂವಿಧಾನಕ್ಕನುಗುಣವಾದ ಮೂಲಭೂತ ಹಕ್ಕುಗಳು: ಅದರ ಅರ್ಥ, ಸಮಾನತೆಯ ಹಕ್ಕು ಸ್ವಾತಂತ್ರ್ಯದ ಹಕ್ಕು, ಶೋಷಣೆಯ ವಿರುದ್ಧದ ಹಕ್ಕು, ಧಾರ್ಮಿಕ ಸ್ವಾತಂತ್ರ್ಯದ ಹಕ್ಕು, ಸಾಂಸ್ಕೃತಿಕ ಮತ್ತು ವಿದ್ಯಾಭ್ಯಾಸದ ಹಕ್ಕು, ಸಂವಿಧಾನದ ಪರಿಹಾರ ಹಕ್ಕು–ಇವುಗಳ ಅರ್ಥ ಮತ್ತು ಅನ್ವಯದ ಸನ್ನಿವೇಶಗಳು | ಕಲಿಯುವ ಅಂಶಗಳನ್ನು ಪುಸ್ತಕಗಳಲ್ಲಿ ಗುರುತಿಸಿಕೊಳ್ಳುವರು |
| ಹಂತ 3 | **ಕಲಿಕಾಂಶಗಳ ಸ್ಪಷ್ಟೀಕರಣ** | ಅಧ್ಯಾಪಕರು ಕೆಳಗಿನ ವಿಷಯಗಳನ್ನು ವಿವರಣೆ, ಪ್ರಶ್ನೆ, ದೃಶ್ಯ ಉಪಕರಣಗಳು, ಚಟುವಟಿಕೆಗಳು(ಚಾರ್ಟು, ವೀಡಿಯೊ, ಸ್ವಂತ ಅನುಭವ, ಉದಾಹರಣೆ, ದೃಷ್ಟಾಂತ)ಇವುಗಳ ಮೂಲಕ ಸ್ಪಷ್ಟಪಡಿಸುವರು. ವ್ಯಕ್ತಿಯ ವ್ಯಕ್ತಿತ್ವದ ವಿಕಸನಕ್ಕೆ ಅಗತ್ಯವಾದ ಸಾಮಾಜಿಕ ಮತ್ತು ರಾಜಕೀಯ ವಾತಾವರಣವನ್ನೇ ಮೂಲಭೂತ ಹಕ್ಕುಗಳು<br>• ಸಮಾನತೆಯ ಹಕ್ಕು: ಕಾನೂನಿನ ಮುಂದೆ ಎಲ್ಲರೂ ಸಮಾನರು, ಜಾತಿ, ಧರ್ಮ, ಲಿಂಗ, ಜನ್ಮಸ್ಥಳಗಳ ಆಧಾರದ ಮೇಲೆ ಭೇದಭಾವ ಮಾಡಬಾರದು. ಸಾರ್ವಜನಿಕ ಸ್ಥಳಗಳು, ಹೋಟೆಲ್‌ಗಳು, ಅಂಗಡಿಗಳು, ಮನರಂಜನಾ ಸ್ಥಳಗಳು, ದೇವಾಲಯಗಳು ಮುಂತಾದ ಸ್ಥಳಗಳಲ್ಲಿ ಯಾರೊಬ್ಬರಿಗೂ ಪ್ರವೇಶ ನಿರಾಕರಿಸಬಾರದು. ಸರ್ಕಾರಿ ಉದ್ಯೋಗ ಸೇರಲು ಪ್ರತಿಯೊಬ್ಬರಿಗೂ ಸಮಾನ ಅವಕಾಶವಿದೆ.<br>• ಸ್ವಾತಂತ್ರ್ಯದ ಹಕ್ಕು:ಈ ಹಕ್ಕು ವಾಕ್ ಮತ್ತು ಅಭಿಪ್ರಾಯ ವ್ಯಕ್ತಪಡಿಸುವ, ಶಸ್ತ್ರರಹಿತ ಶಾಂತಿಯುತವಾಗಿ ಸಭೆ ಸೇರುವ, ಸಂಘ ಸಂಸ್ಥೆಗಳನ್ನು ಸ್ಥಾಪಿಸುವ, ಭಾರತದಲ್ಲಿ | ಸಂದೇಹವಿದ್ದರೆ ಪ್ರಶ್ನೆಗಳ ಮೂಲಕ ಪರಿಹರಿಸಿಕೊಳ್ಳುವುದರ ಮೂಲಕ, ಚಟುವಟಿಕೆಗಳಲ್ಲಿ ಭಾಗವಹಿಸುವುದರ ಮೂಲಕ ಕಲಿಕಾಂಶಗಳನ್ನು ಕಟ್ಟಿಕೊಳ್ಳುವರು. |

| | | | |
|---|---|---|---|
| | | ಸಂಚರಿಸುವ, ವಾಸಿಸುವ, ಯಾವುದೇ ವೃತ್ತಿ ಹೊಂದುವ ಸ್ವಾತಂತ್ರ್ಯವನ್ನು ಸೂಚಿಸುತ್ತದೆ.<br>• ಶೋಷಣೆಯ ವಿರುದ್ಧದ ಹಕ್ಕು:ರಾಜ್ಯವಾಗಲೀ, ಯಾವುದೇ ವ್ಯಕ್ತಿಯಾಗಲೀ, ದುರ್ಬಲರನ್ನು, ಬಡವರನ್ನು, ಮಹಿಳೆಯರನ್ನು, ಮಕ್ಕಳನ್ನು ಶೋಷಣೆ ಮಾಡುವಂತಿಲ್ಲ.<br>• ಧಾರ್ಮಿಕ ಸ್ವಾತಂತ್ರ್ಯದ ಹಕ್ಕು: ಪೌರರು ತಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ಯಾವುದೇ ಧರ್ಮವನ್ನು ಸ್ವೀಕರಿಸುವ, ಪಾಲಿಸುವ, ಪ್ರಚಾರ ಮಾಡುವ ಸ್ವಾತಂತ್ರ್ಯ ಪಡೆದಿದ್ದಾರೆ. ಧಾರ್ಮಿಕ ಸಂಸ್ಥೆಗಳ ನಿರ್ವಹಣೆಗಾಗಿ ತೆರಿಗೆ ಕೊಡಬೇಕೆಂದು ಒತ್ತಾಯಿಸುವಂತಿಲ್ಲ.<br>• ಸಾಂಸ್ಕೃತಿಕ ಮತ್ತು ವಿದ್ಯಾಭ್ಯಾಸದ ಹಕ್ಕು: ದೇಶದ ಪೌರರು ತಮ್ಮದೇ ಆದ ಸಂಸ್ಕೃತಿಯನ್ನು ಪಾಲಿಸಬಹುದು, ಎಲ್ಲರಿಗೂ ವಿದ್ಯಾಭ್ಯಾಸ ಅಥವಾ ಶಿಕ್ಷಣದ ಹಕ್ಕು ಇದೆ.<br>• ಸಂವಿಧಾನದ ಪರಿಹಾರ ಹಕ್ಕು: ಮೂಲಭೂತ ಹಕ್ಕುಗಳನ್ನು ರಕ್ಷಿಸುವ ಹಕ್ಕು. | |
| ಹಂತ 4 | **ಕಲಿಕಾಂಶಗಳ ಪುಷ್ಟೀಕರಣ/ ಅಭ್ಯಾಸ** | ಈಗಾಗಲೇ ವಿವರಿಸಿದ ಅಂಶಗಳಿಗೆ ಹೆಚ್ಚುವರಿ ವಿವರಣೆ, ಉದಾಹರಣೆ, ಇವುಗಳ ಮೂಲಕ ಈಗಾಗಲೇ ಚರ್ಚಿಸಿದ ವಿಷಯಗಳನ್ನ ಸ್ಪಷ್ಟಪಡಿಸುವರು.<br>ಭಾರತದ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ಕುರಿತ 'ವೀಡಿಯೋ' ಪ್ರದರ್ಶಿಸಿ ವಿದ್ಯಾರ್ಥಿಗಳಿಗೆ ಗಮನಿಸಲು ಹೇಳುವರು.<br>ನಾಲ್ಕು ಗುಂಪುಗಳಾಗಿ ವಿಂಗಡಿಸಿ ಚರ್ಚೆಗೆ ಪ್ರೇರೇಪಿಸುತ್ತಾರೆ: " ಒಂದು ವೇಳೆ ಮೂಲಭೂತ ಹಕ್ಕುಗಳಿಲ್ಲದಿದ್ದರೆ, ಭಾರತದಲ್ಲಿ ನಮ್ಮ/ ಪ್ರಜೆಗಳ ಸ್ಥಿತಿ ಏನಾಗುತ್ತಿತ್ತು ಎಂದು ಆಲೋಚಿಸಿ. ಮೂಲಭೂತ ಹಕ್ಕುಗಳು ನಮಗೆ ಹೇಗೆ ಸಹಾಯಕವಾಗಿವೆ ಎಂಬುದನ್ನು ನಿಮ್ಮ ಸನ್ನಿವೇಶಗಳಲ್ಲಿ ಚರ್ಚಿಸಿ, ಸಾರಾಂಶ ತಿಳಿಸಿ.<br>ಗುಂಪಿನ ಆಲೋಚನೆಗಳನ್ನು ಹೇಳಲು ಪ್ರೋತ್ಸಾಹಿಸುವರು. | ಹೆಚ್ಚಿನ ವಿವರಣೆಗಳನ್ನು ಗ್ರಹಿಸುವರು, ವೀಡಿಯೋ ಗಮನಿಸುವರು ಮತ್ತು ಚರ್ಚೆಯಲ್ಲಿ ಭಾಗವಹಿಸಿ ಕ್ರಿಯಾಶೀಲವಾಗಿ ಅಭಿಪ್ರಾಯಗಳನ್ನು ಹಂಚಿಕೊಳ್ಳುವರು. |
| ಹಂತ 5 | **ಮುಕ್ತಾಯ/ಕಲಿಕಾಂಶಗಳ ಸಾರಸಂಗ್ರಹ/ವಿದ್ಯಾರ್ಥಿಗಳ ಕಲಿಕೆಯ ಕುರಿತು ಖಚಿತಪಡಿಸಿಕೊಳ್ಳುವಿಕೆ** | ವಿದ್ಯಾರ್ಥಿಗಳು ಕಲಿತ ಅಂಶಗಳನ್ನು ಸಂಗ್ರಹಿಸಿ ಹೇಳುವರು ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳ ಕಲಿಕೆಯನ್ನು ಅಧ್ಯಾಪಕರು ಖಚಿತಪಡಿಸಿಕೊಳ್ಳುವರು. ಸಂದೇಹಗಳಿದ್ದರೆ ಪರಿಹರಿಸುವರು.<br>ಚಟುವಟಿಕೆ: ಉತ್ತರಗಳನ್ನು ಕೊಟ್ಟು ಪ್ರಶ್ನೆ ಕೇಳಲು ಹೇಳುವುದು ಮತ್ತು ರಸಪ್ರಶ್ನಾ ಚಟುವಟಿಕೆ | ಚಟುವಟಿಕೆಗಳಲ್ಲಿ ಭಾಗವಹಿಸುವರು ಮತ್ತು ಸಂದೇಹಗಳಿದ್ದರೆ ಪರಿಹರಿಸಿಕೊಳ್ಳುವರು. |
| ಹಂತ 6 | ಅನುಸರಣಾ ಚಟುವಟಿಕೆಗಳನ್ನು ನೀಡುವಿಕೆ | ಕೆಳಗಿನ ಅನುಸರಣಾ ಚಟುವಟಿಕೆಯನ್ನು ನೀಡುವರು:<br>ಪ್ರತಿಯೊಂದು ಮೂಲಭೂತ ಕರ್ತವ್ಯವನ್ನು ಚಾರ್ಟಿನಲ್ಲಿ ಬರೆದು ಅದರಿಂದ ಭಾರತದ ಪ್ರಜೆಗಳಿಗಾಗುವ ಪ್ರಯೋಜನಗಳನ್ನೂ ಈ ಹಕ್ಕುಗಳನ್ನು ಅನುಭವಿಸುವಾಗ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳನ್ನೂ ಬರೆಯಿರಿ.<br>(ಮಾರನೆಯ ದಿನ ಈ ಚಾರ್ಟುಗಳನ್ನು ತರಗತಿಯಲ್ಲಿ ತೂಗುಹಾಕಿ ಅವುಗಳ ಕುರಿತ ಹಿಮ್ಮಾಹಿತಿ ನೀಡಲು ಅವಕಾಶ ಕೊಡುವರು). | ಗುರುತಿಸಿಕೊಳ್ಳುವರು. |

# **ಘಟಕ ಪರೀಕ್ಷೆ– 25 ಅಂಕಗಳಿಗೆ**

ಕೆಳಗಿನ ನೀಲಿ ನಕಾಶೆಯ ಪ್ರಕಾರ ಘಟಕ ಪರೀಕ್ಷೆಯನ್ನು ರೂಪಿಸಿ ಪರೀಕ್ಷೆ ಮಾಡುವುದು.
**ಉದ್ದೇಶಗಳು:**
ಜ್ಞಾನ: ಶೇ 30
ಗ್ರಹಿಕೆ: ಶೇ 30
ಅನ್ವಯ: ಶೇ 30
ಕೌಶಲ: 10(ಉದಾಹರಣೆ: ಕಾಲನಕ್ಷೆ ರೂಪಿಸುವಿಕೆ, ಭೂಪಟ ಬಿಡಿಸುವಿಕೆ, ಅಕ್ಷಾಂಶ ರೇಖಾಂಶಗಳನ್ನು ಗುರುತಿಸುವಿಕೆ ಇತ್ಯಾದಿ)

---

**ಪ್ರಶ್ನೆಗಳ ಮಾದರಿ**
**ಪ್ರಬಂಧ ಮಾದರಿ: ಶೇ. 20**
**ಲಘು ಉತ್ತರ: ಶೇ. 50**
**ವಸ್ತುನಿಷ್ಟ ಮಾದರಿ ಶೇ. 30**

---

**ಉಪ ಘಟಕಗಳಿಗೆ ಸಮಾನ ಪ್ರಾಮುಖ್ಯತೆ**

---

**ವಸ್ತುನಿಷ್ಟ ಮಾದರಿ ಪ್ರಶ್ನೆಗಳು**

1. **ಪದಪೂರಣ ಪ್ರಶ್ನೆಮಾಲಿಕೆ:**
**ಸೂಚನೆ: ಕೆಳಗೆ ಅಸಂಪೂರ್ಣ ಹೇಳಿಕೆಗಳನ್ನು ಕೊಡಲಾಗಿದೆ. ಅವುಗಳನ್ನು ಸೂಕ್ತ ಪದಗಳಿಂದ ತುಂಬಿ ವಾಕ್ಯಗಳನ್ನು ಪೂರ್ಣಗೊಳಿಸಿ.**
**(ಪದಪೂರಣ ಯಾವಾಗಲೂ ವಾಕ್ಯದ ಕೊನೆಯಲ್ಲೇ ಬರಬೇಕು)**
**ಉದಾಹರಣೆ:** ಅಧೀನ ನ್ಯಾಯಾಲಯಗಳು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ತೀರ್ಪು ನೀಡಿದಾಗ, ಉನ್ನತ ನ್ಯಾಯಾಲಯ ಅಂತಹ ತೀರ್ಪನ್ನು ತಕ್ಷಣ ಸ್ಥಗಿತಗೊಳಿಸುವಂತೆ ನೀಡುವ ಆಜ್ಞೆಯೇ ______________________
**(ಉತ್ತರ:** ಪ್ರತಿಬಂಧಕಾಜ್ಞೆ)

**2. ಬಹು ಉತ್ತರ ಪ್ರಶ್ನೆಮಾಲಿಕೆ:**

ಕೆಳಗೆ ಅಸಂಪೂರ್ಣ ವಾಕ್ಯಗಳನ್ನೂ ಅವುಗಳ ಮುಂದೆ ಕೆಲವು ಉತ್ತರಗಳನ್ನೂ ಕೊಡಲಾಗಿದೆ. ಅತ್ಯಂತ ಸಮರ್ಪಕವಾದ ಉತ್ತರವನ್ನು ಆಯ್ಕೆಮಾಡಿ ವಾಕ್ಯಗಳನ್ನು ಪೂರ್ಣಗೊಳಿಸಿ.

ಪರಮಾದೇಶ ಎಂಬುದು ______________________

ಎ. ಮಾನವ ಹಕ್ಕು

ಬಿ. ಸಂವಿಧಾನದ ಹಕ್ಕು

ಸಿ. ಮೂಲಭೂತ ಹಕ್ಕು

ಡಿ. ಸಂವಿಧಾನದ ಪರಿಹಾರದ ಹಕ್ಕು (ಉತ್ತರ)

**3. ಸಂಬಂಧಕಲ್ಪಕ ಪ್ರಶ್ನೆಮಾಲಿಕೆ:**

ಕೆಳಗೆ 'ಎ' ಪಟ್ಟಿಯಲ್ಲಿ ಸಂವಿಧಾನದ ಪರಿಹಾರ ಹಕ್ಕುಗಳನ್ನೂ 'ಬಿ' ಪಟ್ಟಿಯಲ್ಲಿ ಅವುಗಳ ವಿವರಗಳನ್ನೂ ಕೊಡಲಾಗಿದೆ. ಹಕ್ಕುಗಳನ್ನು ಅವುಗಳ ವಿವರಗಳೊಂದಿಗೆ ಹೊಂದಿಸಿರಿ (ಹೀಗೆ ಒಂದು ಪಟ್ಟಿಯಲ್ಲಿ ಒಂದೇ ಅಂಶಗಳಿಗೆ ಸಂಬಂಧಿಸಿದ ಅಂಶಗಳನ್ನು ಕೊಡಬೇಕು. ಒಂದೇ ಪಟ್ಟಿಯಲ್ಲಿ ಬೇರೆ ಬೇರೆ ಅಂಶಗಳನ್ನು–ಒಂದು ರಾಜ್ಯದ ಹೆಸರು, ರಾಜನ ಹೆಸರು, ಇಸವಿ, ಕವಿ ಹೀಗೆ ಬೇರೆ ಬೇರೆ ಅಂಶಗಳನ್ನು ಕೊಡಬಾರದು)

| | **ಸಂವಿಧಾನದ ಪರಿಹಾರ ಹಕ್ಕುಗಳು** | **ಹಕ್ಕುಗಳ ವಿವರ** | |
|---|---|---|---|
| 1 | ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳು ಅಕ್ರಮವಾಗಿ ಬಂಧಿತವಾದ ವ್ಯಕ್ತಿಯನ್ನು ತನ್ನ ಮುಂದೆ ನಿಗದಿತ ಅವಧಿಯೊಳಗೆ ಹಾಜರುಪಡಿಸುವಂತೆ ನೀಡುವ ಆಜ್ಞೆಯೇ ಬಂಧಿ ಪ್ರತ್ಯಕ್ಷೀಕರಣವಾಗಿರುತ್ತದೆ. | ಪರಮಾದೇಶ | ಎ |
| 2 | ಅಧೀನ ನ್ಯಾಯಾಲಯಗಳು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ತೀರ್ಪು ನೀಡಿದಾಗ, ಉನ್ನತ ನ್ಯಾಯಾಲಯ ತೀರ್ಪಿಗೆ ಸಂಬಂಧಪಟ್ಟ ದಾಖಲೆಗಳನ್ನು ತನಗೆ ನೀಡುವಂತೆ ಆಜ್ಞೆ ಮಾಡುವದೇ ಉತ್ಪ್ರೇಕ್ಷಣಾ ಲೇಖವಾಗಿರುತ್ತದೆ. | ಅಧಿಕಾರ ಲೇಖ | ಬಿ |
| 3 | ಶಾಸಕಾಂಗ, ಕಾರ್ಯಾಂಗ ಅಥವಾ ಅವುಗಳ ಅಧೀನ ಸಂಸ್ಥೆಗಳು ನಿರ್ವಹಿಸಬೇಕಾದ ಕಾರ್ಯಗಳನ್ನು, ನಿರ್ವಹಿಸದೇ ಇದ್ದಾಗ, ಸಂಬಂಧಪಟ್ಟ ಕಾರ್ಯಗಳನ್ನು ನಿಗದಿತ ಅವಧಿಯೊಳಗೆ ನಿರ್ವಹಿಸುವಂತೆ ಸರ್ವೋಚ್ಚ ನ್ಯಾಯಾಲಯ ಅಥವಾ ಉಚ್ಚ ನ್ಯಾಯಾಲಯ ನೀಡುವ ಆಜ್ಞೆಯೇ ಪರಮಾದೇಶವಾಗಿರುತ್ತದೆ. | ಬಂಧೀ ಪ್ರತ್ಯಕ್ಷೀಕರಣ | ಸಿ |
| 4 | ಸರಿಯಾದ ವ್ಯಕ್ತಿ ಸರಿಯಾದ ಸಾರ್ವಜನಿಕ ಸ್ಥಾನವನ್ನು ಹೊಂದುವಂತೆ ಉನ್ನತ ನ್ಯಾಯಾಲಯ ನೀಡುವ ಆಜ್ಞೆ | ಪ್ರತಿಬಂಧಕಾಜ್ಞೆ | ಡಿ |
| 5 | ಅಧೀನ ನ್ಯಾಯಾಲಯಗಳು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ಅಥವಾ ನೈಸರ್ಗಿಕ ನಿಯಮಗಳಿಗೆ ವಿರುದ್ಧವಾಗಿ ತೀರ್ಪು ನೀಡಿದಾಗ, ಉನ್ನತ ನ್ಯಾಯಾಲಯ ಅಂತಹ ತೀರ್ಪನ್ನು ತಕ್ಷಣ ಸ್ಥಗಿತಗೊಳಿಸುವಂತೆ ನೀಡುವ ಆಜ್ಞೆಯೇ ಪ್ರತಿಬಂಧಕಾಜ್ಞೆಯಾಗಿರುತ್ತದೆ. | ಉತ್ಪ್ರೇಕ್ಷಣಾ ಲೇಖ | ಇ |

**ಉತ್ತರ:**

1–ಸಿ, 2–ಇ, 3–ಎ, 4–ಬಿ, 5–ಡಿ

4. **ವರ್ಗೀಕರಣ ಪ್ರಶ್ನೆಮಾಲಿಕೆ:**
ಕೆಳಗೆ ಕೆಲವು ಪದಗಳನ್ನು ಕೊಡಲಾಗಿದೆ. ಅವುಗಳಲ್ಲಿ ಗುಂಪಿಗೆ ಸೇರದ ಪದ/ಪದಗಳನ್ನು ಗುರುತಿಸಿ
   1. **ಸ್ವಾತಂತ್ರ್ಯದ ಹಕ್ಕು, ಶೋಷಣೆಯ ವಿರುದ್ಧದ ಹಕ್ಕು, ಧಾರ್ಮಿಕ ಸ್ವಾತಂತ್ರ್ಯದ ಹಕ್ಕು, ಸಾಂಸ್ಕೃತಿಕ ಮತ್ತು ವಿದ್ಯಾಭ್ಯಾಸದ ಹಕ್ಕು, ಮಾಹಿತಿ ಹಕ್ಕು**
   **(ಉತ್ತರ: ಮಾಹಿತಿ ಹಕ್ಕು)**

5. **ಸರಣಿ ಪ್ರಶ್ನೆಮಾಲಿಕೆ:**
ಕೆಳಗೆ ಕೆಲವು ಘಟನೆಗಳನ್ನು ಕೊಡಲಾಗಿದೆ. ಅವುಗಳನ್ನು ಕಾಲಾನುಕ್ರಮವಾಗಿ ಜೋಡಿಸಿರಿ.(ಈ ಪಾಠದಲ್ಲಿ ಸಾಧ್ಯವಿಲ್ಲ. ಘಟನಾತ್ಮಕವಾದ ಇತಿಹಾಸದ ಪಾಠಗಳಲ್ಲಿ ಇದನ್ನು ಕೊಡಬಹುದು.)

6. ಸರಿ/ತಪ್ಪು ಪ್ರಶ್ನೆಮಾಲಿಕೆ:
ಕೆಳಗೆ ಕೆಲವು ಹೇಳಿಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದುದನ್ನು **'ಸರಿ'** ಎಂದೂ ತಪ್ಪಾದುದನ್ನು **'ತಪ್ಪು'** ಎಂದೂ ಗುರುತಿಸಿ, ಸರಿಮಾಡಿ.

ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳು ಅಕ್ರಮವಾಗಿ ಬಂಧಿತವಾದ ವ್ಯಕ್ತಿಯನ್ನು ತನ್ನ ಮುಂದೆ ನಿಗದಿತ ಅವಧಿಯೊಳಗೆ ಹಾಜರುಪಡಿಸುವಂತೆ ನೀಡುವ ಆಜ್ಞೆಯೇಪರಮಾದೇಶವಾಗಿರುತ್ತದೆ.

(ಉತ್ತರ: ತಪ್ಪು: ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳು ಅಕ್ರಮವಾಗಿ ಬಂಧಿತವಾದ ವ್ಯಕ್ತಿಯನ್ನು ತನ್ನ ಮುಂದೆ ನಿಗದಿತ ಅವಧಿಯೊಳಗೆ ಹಾಜರುಪಡಿಸುವಂತೆ ನೀಡುವ ಆಜ್ಞೆಯೇಬಂಧಿ ಪ್ರತ್ಯಕ್ಷೀಕರಣವಾಗಿರುತ್ತದೆ.)